# ಕಲ್ಲಿನ ಸರಪಳಿ

ದಕ್ಷಿಣ ಕಂಚಿಯ ವರದರಾಜ ಸ್ವಾಮಿ ದೇವಸ್ಥಾನದ ಆವರಣದ ಬಲ ಭಾಗದಲ್ಲಿ ಒಂದು ಕಲ್ಲಿನ ಮಂಟಪವಿದೆ. ಆ ಕಲ್ಲಿನ ಮಂಟಪವು ನೂರಾರು ಸ್ತಂಭಗಳಿಂದ ನಿರ್ಮಾಣಗೊಂಡಿದೆ. ಪ್ರತಿಯೊಂದು ಸ್ತಂಬವು ಅತ್ಯಂತ ನಾಜೂಕಾದ ಕುಸುರಿ ಕೆಲಸದಿಂದ ಕೂಡಿದೆ. ಈ ಕಲ್ಲಿನ ಮಂಟಪದಲ್ಲಿ ವಿಶೇಷವಾಗಿ ಗಮನ ಸೆಳೆಯುವ ಕೆತ್ತನೆಯೇ ಕಲ್ಲಿನ ಸರಪಳಿಗಳು. ಕಲ್ಲಿನ ಮಂಟಪದ ಎರಡು ಬದಿಯಲ್ಲಿ ಜೋತು ಬಿದ್ದಿರುವ ಕಲ್ಲಿನ ಸರಪಳಿಗಳನ್ನು ಕಾಣಬಹುದು. ಲೋಹದ ಸರಪಳಿಯನ್ನು ಬೆಸುಗೆಯ ಮೂಲಕ ತಯಾರಿಸಬಹುದು. ಆದರೆ ಕಲ್ಲಿನ ಸರಪಳಿಯನ್ನು ಶಿಲ್ಪಿಗಳು ಹೇಗೆ ತಯಾರಿಸಿರಬಹುದು ಎಂಬುದೇ ವಿಸ್ಮಯದ ಸಂಗತಿ. ಈ ಬಗೆಯ ಕಲ್ಲಿನ ಸರಪಳಿಯನ್ನು ಶೃಂಗೇರಿಯ ಈಶ್ವರ ದೇವಸ್ಥಾನದಲ್ಲಿಯೂ ಕಾಣಬಹುದು.

—ಮುರಲೀಧರ ಕುಲಕರ್ಣಿ, ಬೀದರ್









# ಗಿನಿಪಿಗ್ ಗೆಳೆಯರು

ಬಣ್ಣದಲ್ಲಿ ಮೊಲ, ಆಕಾರದಲ್ಲಿ ದೊಡ್ಡ ಇಲಿ, ಹಂದಿಯ ಮೂತಿಯ ಹೋಲಿಕೆ. ಇಂತಹ ಲಕ್ಷಣವುಳ್ಳ ಜೀವಿ ಇರುತ್ತಾ ಎಂದು ಹುಬ್ಬೇರಿಸಬೇಡಿ. ಈ ಎಲ್ಲ ಲಕ್ಷಣ ಹೋಲುವ ಜೀವಿ ಇದ್ದು, ಅದಕ್ಕೆ ಗಿನಿಪಿಗ್ ಅಥವಾ ಗಿನಿಯಾ ಪಿಗ್ ಎಂದು ಕರೆಯಲಾಗುತ್ತದೆ. ಐದು ಗಿನಿಪಿಗ್‌ಗಳನ್ನು ಸಾಕಿರುವ ಶ್ರೀಯಾ ಮತ್ತು ಶ್ರೀಕಾ ಸಹೋದರಿಯರಿಗೆ ಇವು ಮೆಚ್ಚಿನ ಗೆಳೆಯರು. ತಮ್ಮ ಬಿಡುವಿನ ವೇಳೆಯನ್ನು ಇವುಗಳ ಪೋಷಣೆಯಲ್ಲಿ ಕಳೆಯುತ್ತಾರೆ. ಇವುಗಳೊಂದಿಗೆ ಆಟ ಆಡುತ್ತಾರೆ.

ಸಾಮಾನ್ಯವಾಗಿ ನಾಯಿ, ಬೆಕ್ಕುಗಳಂತಹ ಸಾಕು ಪ್ರಾಣಿಗಳಿಗೆ ಸಂಸ್ಕರಿಸಿದ ಪ್ಯಾಕೆಟ್ ಆಹಾರವನ್ನು ಕೊಟ್ಟು ಸಾಕುವ ಪದ್ಧತಿಯಿದೆ. ಆ ಪದ್ಧತಿಯ ಹೊರತಾಗಿ ಈ ಗಿನಿಪಿಗ್‌ಗಳಿಗೆ ಹಸುರು ಹುಲ್ಲು, ತರಕಾರಿಗಳೆಂದರೆ ಅಚ್ಚುಮೆಚ್ಚು. ಆಹಾರದಲ್ಲಿ ಉಪ್ಪಿನ ಅಂಶವಿದ್ದರೆ ಆರೋಗ್ಯಕ್ಕೆ ಅಷ್ಟು ಒಳ್ಳೆಯದಲ್ಲವೆಂಬ ಕಾರಣಕ್ಕೆ, ಉಪ್ಪು ಹಾಕದೆ ಮಾಡಿದ ಅನ್ನವನ್ನು ಕೊಡುತ್ತಾರೆ. ಪ್ರತಿ ಮೂರು ತಿಂಗಳಿಗೊಮ್ಮೆ ಮರಿಗಳಿಗೆ ಜನ್ಮ ನೀಡುವ ಇವುಗಳನ್ನು ಸಾಕುವುದು ಸ್ವಲ್ಪ ಕಷ್ಟ ಎನಿಸಿದರೂ, ಆ ಕಾರ್ಯದಲ್ಲಿ ಪ್ರೀತಿಯಿಂದ ತೊಡಗಿಕೊಂಡಿದ್ದಾರೆ. ಹಸು, ನಾಯಿ, ಕೋಳಿಗಳ ಜೊತೆಯಲ್ಲಿ ಗಿನಿಪಿಗ್‌ನಂತಹ ಅಪರೂಪದ ಜೀವಿಯನ್ನು ಸಾಕುತ್ತಿರುವ ಸಹೋದರಿಯರ ಗುಣಕ್ಕೆ ಮೆಚ್ಚುಗೆಯಿರಲಿ.

—ಜಯಂತಿ ರಾಘವೇಂದ್ರ, ಆಗುಂಬೆ